# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ 656/2016

ಸಿ.ಡಬ್ಲೂಃ 01 ಪಿಡಬ್ಲೂಃ01

ಸಾಕ್ಷಿದಾರರ ಹೆಸರುಃ ಶಿವಕುಮಾರ ತಂದೆಃ ಎಮ್.ಎಸ್. ಗೌಡರ
ವಯಸ್ಸುಃ 47 ವರ್ಷ
ಉದ್ಯೋಗಃ ಪ್ರಾಥಮಿಕ ಶಾಲೆಯ ಶಿಕ್ಷಕರು
ಸಾಕೀನಃ ಹರಪ್ಪನಹಳ್ಳಿ

ದಿಃ 13-01-2025 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಂದುವರೆದ ಮುಖ್ಯವಿಚಾರಣೆ ಸಸಅ ರವರಿಂದ:

ಆರೋಪಿತರ ಪರಿಚಯ ಇರುವುದಿಲ್ಲ.

**02.** ನಾನು ಮತ್ತು ನನ್ನ ಹೆಂಡತಿಯಾದ ಚಾ.ಸಾ.02 ರವರು ಶಿಕ್ಷಕರು ಆಗಿರುತ್ತೇವೆ. ದಿ.07-01-2016 ರಂದು ನಾವು ಎಂದಿನಂತೆ ಶಾಲೆಗೆ ಹೋಗಿರುತ್ತೇವೆ. ಆ ದಿನ ನನ್ನ ಹೆಂಡತಿಯಾದ ಚಾ.ಸಾ.02 ರವರು ಸಂಜೆ.05.20 ರ ಸುಮಾರಿಗೆ ಮೊದಲು ಮನೆಗೆ ಬಂದಿರುತ್ತಾರೆ, ಆಗ ಮನೆಯ ಬೀಗ ಮುರಿದಿರುವುದನ್ನು ಕಂಡು ಒಳಗೆ ಹೋಗಿ ನೋಡಿದಾಗ ನಮ್ಮ ಮನೆಯ ಟಿವಿ, ಲೈಟು, ಫ್ಯಾನು ಎಲ್ಲವೂ ಚಾಲನೆಯಲ್ಲಿತ್ತು ನಮ್ಮ ಎರಡು ಬೆಡರೂಂಮಿನ ನಡುವೆ ಇರುವಂತಹ ಜಾಗದಲ್ಲಿ ಬೀರುವನ್ನು ಇಟ್ಟಿರುತ್ತೇವೆ ಸದರಿ ಬೀರುವಿನ ಬೀಗ ಮುರಿದು ಅದರಲ್ಲಿದ್ದ 4 ರೋಡಗೋಲ್ಡ ಬಳೆಗಳು, 10/- ಮುಖಬೆಲೆಯ 24 ನೋಟುಗಳು ಒಟ್ಟು 240/- ರೂಪಾಯಿಗಳು, 500/- ರೂ ಮುಖಬೆಲೆಯ 20 ನೋಟುಗಳು ಒಟ್ಟು 10,000/- ನಗದು ಹಣ, ನನ್ನ ಮಗಳ ಒಂದು ತೊಲೆಯ ಕೊರಳಿನ ಬಂಗಾರದ ಚೈನ ಸರ್, ನನ್ನ ಹೆಂಡತಿಯಾದ ಚಾ.ಸಾ.02 ರವರ ಒಂದು ಬಂಗಾರದ ಸಾಧಾ ಉಂಗುರ ಅದರ ತೂಕ ಅರ್ಧ ತೊಲೆ, ಮತ್ತು ನನ್ನ ಎರಡು ಬಂಗಾರದ ಚೌಕಾಕಾರದ 2 ಉಂಗುರಗಳು ಅಂದಾಜು ತೂಕ 2 ಮುಕ್ಕಾಲು ತೊಲೆ ಆಗಿರುತ್ತದೆ. ಅದನ್ನು ಯಾರೋ ಕಳ್ಳರು ಬಂದು ನಾವು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಬಂದು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನಂತರ ನಾನು ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ನಾನು ಠಾಣೆಯಲ್ಲಿದ್ದಾಗಲೇ ನನ್ನ ಹೆಂಡತಿಯಾದ

ಚಾ,ಸಾ.02 ರವರು ನನಗೆ ದೂರವಾಣಿ ಮೂಲಕ ನಾನು 500/- ಮುಖಬೆಲೆಯ ಒಟ್ಟು 20 ನೋಟುಗಳನ್ನು ನಾನು ನನ್ನ ಪೋಸ್ಟ ಆಫೀಸಿನ RD ಬುಕ್ಕಿನಲ್ಲಿ ಇಟ್ಟಿರುವುದನ್ನು ಗಮನಿಸಿ ನನಗೆ ತಿಳಿಸಿರುತ್ತಾರೆ. ನಮ್ಮ ತಾಯಿಯವರು ನನ್ನ ಹೆಂಡತಿಯಾದ ಚಾ,ಸಾ.02 ರವರ ಮನೆಗೆ ಹೋಗಿರುತ್ತಾರೆ, ಆ ಸಮಯದಲ್ಲಿ ನಮ್ಮ ಮನೆಯಲ್ಲಿ ಕಳ್ಳತನ ಆಗಿರುವ ಬಗ್ಗೆ ವಿಷಯ ತಿಳಿದು ಅವರು ನಮ್ಮ ಅತ್ತೇ ಯವರಿಗೆ ನನ್ನ ತಾಯಿಯವರು ನನ್ನ ಮಗಳ ಕೊರಳ ಚೈನ ಸರ ಮತ್ತು ನನ್ನ 02 ಉಂಗುರ ಮತ್ತು ನನ್ನ ಹೆಂಡತಿಯ 01 ಉಂಗುರ ತನ್ನ ಹತ್ತಿರವೇ ಇರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಕಳುವಾಗಿದೆ ಎಂದು ಭಾವಿಸಿದ ಬಂಗಾರದ ಒಡವೆಗಳು ನನ್ನ ತಾಯಿಯ ಬಳಿ ದೊರೆತಿರುತ್ತದೆ ಎಂದು ನಾನು ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ ನಮ್ಮ ಮನೆಯಲ್ಲಿ ಗಾಡ್ರೆಜಿನ ಲಾಕರನಲ್ಲಿ ಇಟ್ಟಿದ್ದ 10/- ಮುಖ ಬೆಲೆಯ 240/- ರೂಪಾಯಿ ಹಾಗೂ 4 ರೋಡಗೋಲ್ಡ ಬಳೆಗಳು ಮಾತ್ರ ಕಳ್ಳತನವಾಗಿರುತ್ತದೆ ಎಂದು ಹೇಳಿಕೆಯನ್ನು ನೀಡಿರುತ್ತೇನೆ.

03. ದಿ.08-01-2016 ರಂದು ನಮ್ಮ ಮನೆಗೆ ಪೊಲೀಸರು ಭೇಟಿ ನೀಡಿ ಸ್ಥಳವನ್ನು ಪರಿಶೀಲಿಸಿದರು ನಂತರ ಪಂಚರಾದ ಚಾ.ಸಾ.06 ಮತ್ತು 07 ರವರ ಸಮಕ್ಷಮ ಬೆ.09.00 ರಿಂದ 10.00 ಗಂಟೆ ಪಂಚನಾಮೆಯನ್ನು ಹಾಗೂ ಸ್ಥಳದಲ್ಲಿ 6 ಫೋಟೋಗಳನ್ನು ತೆಗೆದಿರುತ್ತಾರೆ, ಹಾಗೂ ಕಚ್ಛಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿರುತ್ತಾರೆ, ನಾನು ಆ ದಿನ ಪೊಲೀಸರಿಗೆ ನೀಡಿದ ದೂರನ್ನು ನಿ.ಪಿ.01 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.01 ಎ. ಎಂದು ಗುರುತಿಸಲಾಯಿತು ಮತ್ತು ನಾನು ಸ್ಥಳವನ್ನು ತೊರಿಸಿದಾಗ ಪೊಲೀಸರು ಮಾಡಿದ ಪಂಚನಾಮೆ ಹಾಗೂ ಕಚ್ಛಾ ನಕಾಶೆಯನ್ನು ಈಗ ನೋಡುತ್ತಿದ್ದು ನಿ.ಪಿ.02 ಮತ್ತು 03 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.02 ಎ. ಮತ್ತು 03 ಎ. ಎಂದು ಗುರುತಿಸಲಾಯಿತು. ಆ ದಿನ ನಿ.ಪಿ.2 ಮತ್ತು 03 ರ ಸಮಯದಲ್ಲಿ ಪೊಲೀಸರು ತೆಗೆದ 6 ಫೋಟೋಗಳಲ್ಲಿ ನಾನು ಇರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ, ಸಿಡಿಯನ್ನು

ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ನಿಶಾನೆಯನ್ನಾಗಿ ಗುರುತಿಸಲಾಗಿರುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಶ್ರೀ.**SGR** ವಕೀಲರವರಿಂದ ;

**04.**ದಿ.**07-01-2016** ರಂದು ನಾನು ಮತ್ತು ನನ್ನ ಹೆಂಡತಿ ಕಳ್ಳತನವಾದ ನಂತರ ಸುಮಾರು ಅರ್ಧ ಗಂಟೆ ಪರಿಶೀಲಿಸಿ ನೋಡಿರುತ್ತೇವೆ. ಆ ದಿನ ನಾವು ಪೊಲೀಸ್? ಠಾಣೆಗೆ ಸಂಜೆ.**07.30**ರ ಸುಮಾರಿಗೆ ಹೋಗಿರುತ್ತೇವೆ.ಪಿರ್ಯಾದಿಯನ್ನು ನಾನು ಮನೆಯಲ್ಲಿ ಬರೆದುಕೊಂಡು ಹೋಗಿ ಅದನ್ನು ಠಾಣೆಯಲ್ಲಿ ನೀಡಿದಾಗ, ಅದನ್ನು ಅವರು ಓದಿ ಪಿರ್ಯಾದಿಯನ್ನು ಇನ್ನೊಂದು ಸಾರಿ ಸರಿಯಾಗಿ ಬರೆದುಕೊಂಡಿ ಎಂದು ಹೇಳಿದಾಗ ನಾನು ಠಾಣೆಯಲ್ಲಿಯೇ ಇನ್ನೊಂದು ಸಾರಿ ಪಿರ್ಯಾದಿಯನ್ನು ಬರೆದುಕೊಟ್ಟಿರುತ್ತೇನೆ. ನಾನು ಸ್ವತಹ ನನ್ನ ಹಸ್ತಾಕ್ಷರದಿಂದ ಬರೆದು ಪಿರ್ಯಾದಿಯನ್ನು ಬರೆದಿರುತ್ತೇನೆ. ನಾನು ನನ್ನ ಹಸ್ತಾಕ್ಷರದಿಂದ ಬರೆದು ಕೊಟ್ಟಂತಹ ಪಿರ್ಯಾದಿಯನ್ನು ನೋಡಿ ಪೊಲೀಸ್?ಠಾಣೆಯಲ್ಲಿ ಗಣಕೀಕೃತ ಮಾಡಿರುತ್ತಾರೆ. ಇದೆಲ್ಲಾ ಮುಗಿಯುವಷ್ಟರಲ್ಲಿ ಸುಮಾರು **08.30** ರಿಂದ **9.00** ಗಂಟೆಗೆ ನಾನು ಮನೆಗೆ ಬಂದಿರುತ್ತೇನೆ. ನಾನು ಠಾಣೆಯಲ್ಲಿ ಇದ್ದಾಗಲೇ ನನ್ನ ಹೆಂಡತಿಯಿಂದ ನನಗೇ ಕರೆಬಂದಿರುತ್ತದೆ.ನನ್ನ ಹೆಂಡತಿಯು ಕರೆಯಲ್ಲಿ ನಾನೇನು **10,000/-** ಕಳೆದು ಹೋಗಿರುತ್ತದೆ ಎಂದುಕೊಂಡಿರುತ್ತೇನೆ ಅದು **POST OFFICE** ನ ಪುಸ್ತಕದಲ್ಲಿ ಇರುತ್ತದೆ ಎಂದು ಹೇಳಿರುತ್ತಾರೆ.

**05.** ಕಳ್ಳತನ ಮಾಡಿದವರು ಯಾರು ಎಂದು ನಾನು ನೋಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ನಾನು ಶಾಲೆಗೆ ಹೋಗಿದ್ದರಿಂದ ನಾನು ಅವರನ್ನು ನೋಡಿರುವುದಿಲ್ಲ. ಪಿರ್ಯಾದಿಯನ್ನು ನೀಡಿದ ಮರುದಿನವೇ ಕಳ್ಳತನ

ಮಾಡಿದವನನ್ನು ನನ್ನ ಮನೆಗೆ ಪೊಲೀಸರು ಕರೆದುಕೊಂಡು ಬಂದಿರುತ್ತಾರೆ, ಆತ ಯಾವ ರೀತಿ ಕಳ್ಳತನ ಮಾಡಿರುತ್ತಾನೆ ಎಂದು ತೋರಿಸಲು ಕರೆದುಕೊಂಡು ಬಂದಿರುತ್ತಾರೆ. ಪೊಲೀಸರು ನಮ್ಮ ಮನೆಗೆ 2-3 ಬಾರಿ ಬಂದಿರುತ್ತಾರೆ. ಪಂಚನಾಮೆ ಮಾಡಿದ ದಿನಾಂಕವು ನನಗೆ ನೆನಪಿರುವುದಿಲ್ಲ. ಫೋಟೋಗಳನ್ನು ಪೊಲೀಸರು ಕರೆದುಕೊಂಡು ಬಂದ ಫೋಟೋಗ್ರಾಫರ ತೆಗೆದಿರುತ್ತಾರೆ. ಪಿರ್ಯಾದಿಯನ್ನು ನೀಡಿದ 2-3 ದಿನದ ನಂತರ ಮರುಹೇಳಿಕೆಯನ್ನು ನೀಡಿರುತ್ತೇನೆ.

**06.** ನನ್ನ ಮನೆಯಲ್ಲಿ ಯಾವುದೇ ಕಳ್ಳತನ ಆಗಿರುವುದಿಲ್ಲ, ಪೊಲೀಸರು ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾವು ಶಿಕ್ಷಕರು ಆಗಿರುವುದರಿಂದ ನಮ್ಮ ಮನೆಯಲ್ಲಿ ಕಳ್ಳತನವಾಗಿದ್ದರೆ ನಾವು ನಿರ್ದಿಷ್ಟವಾಗಿ ಎಲ್ಲವನ್ನು ಹೇಳುತ್ತಿದ್ದೇವು ಎಂದರೆ ಸರಿಯಲ್ಲ. ಪೊಲೀಸರು ನಮ್ಮ ಮನೆಗೆ ಬಂದಿರುವುದಿಲ್ಲ, ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮರುಳಸಿದ್ದಪ್ಪ ಮತ್ತು ಸುರೇಶರವರು ಯಾವ ಊರಿನವರು ಎಂದರೆ ಸಾಕ್ಷಿಯು ನಮ್ಮ ಮನೆ ಪಕ್ಕದಲ್ಲಿಯೇ ಡಾಬಾ ಇಟ್ಟುಕೊಂಡು ನಡೆಸುತ್ತಾರೆ ಹೀಗಾಗಿ ಅವರು ಇದೇ ಊರಿನವರು. ಯಾವ ಕಳ್ಳತನ ನಡಿಯದೆ ಇದ್ದರೂ ಸಹ ಪೊಲೀಸರ ಮಾತನ್ನು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆಗಳುಃ

ಪ್ರಶ್ನೆಃ ಆರೋಪಿತ ಯಾರು ಎಂದು ನಿಮಗೆ ಗೊತ್ತಿರುತ್ತದೆಯಾ

ಉತ್ತರಃ ಪೊಲೀಸರು ಕರೆದುಕೊಂಡು ಬಂದಾಗ ಆರೊಪಿತನನ್ನು ನೋಡಿರುತ್ತೇನೆ ಆತನ ಹೆಸರು ಬಾವಿಮನಿ ಶಿವಕುಮಾರ ಎಂದು ತಿಳಿದಿರುತ್ತದೆ.

<u>ಮರುವಿಚಾರಣೆ ಇರುವುದಿಲ್ಲಃ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

" ನನ್ನ ಸಮಕ್ಷಮ "

Sd/-

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.

## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 656/2016**

**ಸಿ.ಡಬ್ಲೂಃ 02 ಪಿಡಬ್ಲೂಃ02**

ಸಾಕ್ಷಿದಾರರ ಹೆಸರುಃ ಸುಜಾತಾ ಗಂಡಃ ಶಿವಕುಮಾರ
ವಯಸ್ಸುಃ 43 ವರ್ಷ
ಉದ್ಯೋಗಃ ಪ್ರಾಥಮಿಕ ಶಾಲಾ ಶಿಕ್ಷಕರು
ಸಾಕೀನಃ ಹರಪ್ಪನಹಳ್ಳಿ

ದಿಃ **13-01-2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಂದುವರೆದ ಮುಖ್ಯವಿಚಾರಣೆ ಸಸಅ ರವರಿಂದ:

ಆರೋಪಿತರ ಪರಿಚಯ ಇರುವುದಿಲ್ಲ.

**02.** ನಾನು ಮತ್ತು ನನ್ನ ಗಂಡನಾದ ಚಾ.ಸಾ.**01** ರವರು ಶಿಕ್ಷಕರು ಆಗಿರುತ್ತೇವೆ. ದಿ.**07-01-2016** ರಂದು ನಾವು ಎಂದಿನಂತೆ ಶಾಲೆಗೆ ಹೋಗಿರುತ್ತೇವೆ. ಆ ದಿನ ನಾನು ಸಂಜೆ.**05.20** ರ ಸುಮಾರಿಗೆ ಮೊದಲು ಮನೆಗೆ ಬಂದಿರುತ್ತೇನೆ, ಆಗ ಮನೆಯ ಬೀಗ ಮುರಿದಿರುವುದನ್ನು ಕಂಡು ಒಳಗೆ ಹೋಗಿ ನೋಡಿದಾಗ ನಮ್ಮ ಮನೆಯ ಟಿವಿ, ಲೈಟು, ಫ್ಯಾನು ಎಲ್ಲವೂ ಚಾಲನೆಯಲ್ಲಿತ್ತು ಆಗ ನಾನು ನನ್ನ ಗಂಡನಾದ ಚಾ,ಸಾ.**01** ರವರಿಗೆ ಫೋನ ಮಾಡಿ ಯಾಕೆ ಮನೆಯ ಚೀಲಕವನ್ನು ಹಾಕಿ ಲೈಟನ್ನು ಹಾಕಿ ಹೋಗಿರುತ್ತೀರಿ ಎಂದು ವಿಚಾರಿಸಿದಾಗ ನಾನು ಮನೆಗೆ ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಗ ನನ್ನ ಗಂಡನಾದ ಚಾ.ಸಾ.**1** ರವರು ಹಡಗಲಿಗೆ ಬಂದಿರುತ್ತೇನೆ ಆದರೆ ನಾನು ಅದಾಮ ಸ್ಟೋರನಲ್ಲಿರುತ್ತೇನೆ ಎಂದು ತಿಳಿಸಿರುತ್ತಾರೆ ನಾನು ಮನೆಯಲ್ಲಿ ನಡೆದ ವಿಚಾರವನ್ನು ತಿಳಿಸಿದಾಗ ಅವರು ಗಾಬರಿಗೊಂಡು ಮನೆಗೆ ಬಂದಿರುತ್ತಾರೆ, ಆಗ ನಮ್ಮ ಎರಡು ಬೆಡರೂಂಮಿನ ನಡುವೆ ಇರುವಂತಹ ಜಾಗದಲ್ಲಿ ಬೀರುವನ್ನು ಇಟ್ಟಿರುತ್ತೇವೆ ಸದರಿ ಬೀರುವಿನ ಬೀಗ ಮುರಿದು ಅದರಲ್ಲಿದ್ದ ವಸ್ತುಗಳು ಹಾಗೂ ಬಟ್ಟೆಗಳೆಲ್ಲ ಚೆಲ್ಲಾಪಿಲ್ಲಿಯಾಗಿರುತ್ತದೆ, ಬಿರುವಿನ ಮೇಲೆ ಇಟ್ಟಿದ್ದ ಟ್ರಂಕಗಳ ಚೀಲಕಗಳು ಸಹ ತೆಗೆದಿರುತ್ತದೆ. ನಂತರ **4** ರೋಡಗೋಲ್ಡ ಬಳೆಗಳು, **10/-** ಮುಖಬೆಲೆಯ **24** ನೋಟುಗಳು ಒಟ್ಟು **240/-** ರೂಪಾಯಿಗಳು, **500/-** ರೂ ಮುಖಬೆಲೆಯ **20** ನೋಟುಗಳು ಒಟ್ಟು

**10,000/-** ನಗದು ಹಣ, ನನ್ನ ಮಗಳ ಒಂದು ತೊಲೆಯ ಕೊರಳಿನ ಬಂಗಾರದ ಚೈನ ಸರ್, ನನ್ನ ಗಂಡನಾದ ಚಾ.ಸಾ.**01** ರವರ ಚೌಕಾಕಾರದ **2** ಉಂಗುರಗಳು ಮತ್ತು ಅಂದಾಜು ತೂಕ **2** ಮುಕ್ಕಾಲು ತೊಲೆ ಆಗಿರುತ್ತದೆ. ನನ್ನ ಒಂದು ಬಂಗಾರದ ಸಾಧಾ ಉಂಗುರ ಅದರ ತೂಕ ಅರ್ಧ ತೊಲೆ ಆಗಿರುತ್ತದೆ, ಅದನ್ನು ಯಾರೋ ಕಳ್ಳರು ಬಂದು ನಾವು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ಬಂದು ಕಳ್ಳತನ ಮಾಡಿರುತ್ತಾರೆ ಎಂದು ತಿಳಿದು ಬಂದಿರುತ್ತದೆ. ನಂತರ ನನ್ನ ಗಂಡನಾದ ಚಾ.ಸಾ.**01** ರವರು ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. **PSI** ಪ್ರಕಾಶ ರಾತೋಡರವರ ಮುಂದೆ ಸದರಿ ವಿಚಾರವನ್ನು ತಿಳಿಸಿರುತ್ತೇನೆ. ನಾನು ಹೇಳಿಕೆಯನ್ನು ನೀಡಿರುವುದಿಲ್ಲ.

*(ಈ ಹಂತದಲ್ಲಿ ಸ.ಸ.ಅ.ರವರು ಭಾಗಶಃ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಸ.ಸ.ಅರವರಿಂದ

**03.** ದಿ.**07-01-2016** ರಂದು ರಾತ್ರಿ.**09.00** ಗಂಟೆಗೆ ಚಾ.ಸಾ.**01** ರವರು ದೂರನ್ನು ನೀಡಲು ಹಡಗಲಿ ಪೊಲೀಸ್ ಠಾಣೆಗೆ ಹೋಗಿರುತ್ತಾರೆ ನಂತರ ನಾನು ಗಾಡ್ರೆಜನಲ್ಲಿ ಇದ್ದ ಬಟ್ಟೆಗಳನ್ನು ಜೋಡಿಸುತ್ತಿರುವಾಗ **Post Office** ನ ಪಾಸಪುಸ್ತಕಗಳು ಕೆಳಗೆ ಬಿದ್ದಿದವು ಅವುಗಳನ್ನು ಜೋಡಿಸುವಾಗ ಒಂದು ಪಾಸಪುಸ್ತಕದಲ್ಲಿ **500/-** ಮುಖಬೆಲೆಯ ಒಟ್ಟು **10,000/-** ಹಣ ಸಿಕ್ಕಿರುತ್ತದೆ ಸದರಿ ಹಣವನ್ನು ದಿ.**05-01-2016** ರಂದು **BDCC Bank** ನಿಂದ ನನ್ನ ಖಾತೆಯಿಂದ **16,000/-** ಹಣವನ್ನು ಬಿಡಿಸಿಕೊಂಡು ಆ ಹಣದಲ್ಲಿ ದಿ.**07-01-2016** ರಂದಎ **4645/-** ರೂಗಳನ್ನು **Post Office** ಗೆ ಕಟ್ಟಿ ಸ್ವಲ್ಪ ಹಣವನ್ನು ಖರ್ಚು ಮಾಡಿದ ಉಳಿದ ಹಣವನ್ನು **10,000/-** ಗಳನ್ನು ಪಾಸಪುಸ್ತಕದಲ್ಲಿಯೇ ಇಟ್ಟಿರುವುದನ್ನು ಕಂಡು ನನ್ನ ಗಂಡನಾದ ಚಾ,ಸಾ. ರವರಿಗೆ ತಿಳಿಸಿದೆನು ನಂತರ ನನ್ನ ತವರು ಮನೆಯಿಂದ ಫೋನ ಬಂದಿದ್ದು ಅವರೊಂದಿಗೆ ಮಾತನಾಡುತ್ತಿದ್ದಾಗ ಕಳ್ಳತನ ಆದ ವಿಚಾರವನ್ನು ನಾನು ನನ್ನ ತಾಯಿಗೆ ತಿಳಿಸಿರುತ್ತೇನೆ ನಮ್ಮ ಅತ್ತೇಯವರು ಬಂದಿರುತ್ತಾರೆ ಎಂದು ನಮ್ಮ ತಾಯಿಯವರು ಹೇಳಿರುತ್ತಾರೆ. ಆಗ ನಮ್ಮ ಅತ್ತೇಯವರು ನಮ್ಮ ಮನೆಯಲ್ಲಿ ನಾವು ಕಳ್ಳತನವಾಗಿದೆ ಎಂದು ಭಾವಿಸಿದ್ದ ನನ್ನ ಮಗಳ ಬಂಗಾರ ಚೈನು ಸರ ಹಾಗೂ ನನ್ನ ಗಂಡನ **2** ಉಂಗರು ಹಾಗೂ ನನ್ನ **1**

ಉಂಗುರ ಅವರ ಬಳಿ ಇರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿ. ನಂತರ ನಮ್ಮ ಮನೆಯ ಗಾಡ್ರೆಜಿನಲ್ಲಿರುವ **10*24=240/-** ಹಾಗೂ **04** ರೋಲ್ಡ ಗೋಲ್ಡ ಬಳೆಗಳು ಮಾತ್ರ ಕಳ್ಳತನವಾಗಿರುವುದು ಎಂದು ನಮಗೆ ತಿಳಿದುಬಂದಿರುತ್ತದೆ ಎಂದು ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನಂತರ ಪೊಲೀಸರು ನಮಗೆ ಬಾವಿಮನೆ ಶಿವಕುಮಾರ ರಾಗಿ ಮಸಲವಾಡದವರು ಕಳ್ಳತನ ಮಾಡಿರುತ್ತಾರನೆ ಎಂದು ತಿಳಿವಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃಶ್ರೀ ಎಸ್ಸ್.ಜಿ.ಆರ್. ವಕೀಲರವರಿಂದ</u>

**04.**ದಿ.**07-01-2016** ರ ಸಂಜೆ.**07.00** ಗಂಟೆ ಮೇಲ್ಮಟ್ಟು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ **240/-** ಮತ್ತು **4** ರೊಲ್ಡಗೋಲ್ಡ ಬಳೆ ಕಳ್ಳತನವಾಗಿರುತ್ತದೆ ಎಂದು ಹೇಳಿರುತ್ತೇನೆ. ಆ ಒಂದು ಬಾರಿ ಮಾತ್ರ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನ್ನ ಗಂಡ ದೂರನ್ನು ನೀಡಿದ್ದರಿಂದ ಅವರಿಗೆ ಅನುಕೂಲ ಆಗಲಿ ಎಂದು ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರಕಾಶ ರಾತೋಡರವರು ನನ್ನ ಹೇಳಿಕೆಗಳನ್ನು ತೆಗೆದುಕೊಂಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಕಳ್ಳತನ ಮಾಡಿರುತ್ತಾನೆ ಎಂದು ತೋರಿಸಿರುತ್ತಾರೆ ಎಂದು ಹೇಳುವ ಮಾತು ಸುಳ್ಳು ಎಂದರೆ ಸರಿಯಲ್ಲ, ಆರೋಪಿತನನ್ನು ನಾನು ನೋಡಿರುವುದಿಲ್ಲ.

<u>ಮರುವಿಚಾರಣೆ ಇರುವುದಿಲ್ಲಃ</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

" ನನ್ನ ಸಮಕ್ಷಮ "

Sd/-

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.